**SC No. 23/2024**
**PW-7**

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

## ಎಸ್. ಸಿ. 23/2024

| | | |
|---|---|---|
| ಸಾಕ್ಷಿದಾರರ ಹೆಸರು | ಶಿವಣ್ಣ | ಪ್ರಮಾಣ ವಚನ ಮಾಡಿದ ದಿನಾಂಕ: 19.01.2026 |
| ತಂದೆಯ/ಗಂಡನ ಹೆಸರು | ಮಹದೇವು | |
| ವಯಸ್ಸು | 40 ವರ್ಷ | |
| ವೃತ್ತಿ | ಗಾರೆ ಕೆಲಸ | ಪ್ರಾ.ಸಾಃ 7 |
| ವಾಸ ಸ್ಥಳ | ಗುಂಡ್ಲುಪೇಟೆ, ಹಾಲಿ ವಾಸ ಟಿ.ಕೆ. ಲೇಔಟ್ ಮೈಸೂರು | ಚಾ.ಸಾಃ 3 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ಕಳೆದ 15 ವರ್ಷದಿಂದ ಗಾರೆ ಕೆಲಸ ಮಾಡಿಕೊಂಡಿರುತ್ತೇನೆ. ನಾನು ಮೈಸೂರು ಮತ್ತು ನಂಜನಗೂಡಿನಲ್ಲಿ ಗಾರೆ ಕೆಲಸ ಮಾಡಿಕೊಂಡಿರುತ್ತೇನೆ. ಮೈಸೂರಿನಲ್ಲಿ ಗಾರೆ ಕೆಲಸ ಮಾಡುವುದು ಇದ್ದರೆ ಕೂಲಿ ಕಾರ್ಮಿಕರನ್ನು ಟೋಲ್ ಗೇಟ್, ಹೋಟೆಲ್ ಶಾಂತಿ ಸಾಗರ್ ದಿಂದ ಕರೆದುಕೊಂಡು ಹೋಗುತ್ತೇವೆ. ನಂಜನಗೂಡಿನಲ್ಲಿ ಗಾರೆ ಕೆಲಸ ಇದ್ದರೆ ಕಾರ್ಮಿಕರನ್ನು ನಂಜನಗೂಡಿನ ದೇವಸ್ಥಾನದ ಬೀದಿಯ 6 ನೇ ಕ್ರಾಸ್ ನಿಂದ ಕರೆದುಕೊಂಡು ಹೋಗುತ್ತೇವೆ.

ನಾನು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನನ್ನು

ನೋಡಿರುತ್ತೇನೆ. ಆತನನ್ನು ನಂಜನಗೂಡಿನಲ್ಲಿ ಗಾರೆ ಕೆಲಸ ಇದ್ದಾಗ ಕರೆದುಕೊಂಡು ಹೋಗಿರುತ್ತೇನೆ. ನಾನು ಆರೋಪಿತನನ್ನು ಈಗ್ಗೆ 2–3 ವರ್ಷಗಳ ಹಿಂದೆ ಗಾರೆ ಕೆಲಸಕ್ಕೆ ಕರೆದುಕೊಂಡು ಹೋಗಿದ್ದೆ. ನಂಜನಗೂಡಿನಲ್ಲಿ ಮನೆಯನ್ನು ಕಟ್ಟುವ ಕೆಲಸ ಇತ್ತು. ಆರೋಪಿತನು ನನ್ನ ಕಡೆ ಒಂದು ದಿನ ಮಾತ್ರ ಗಾರೆ ಕೆಲಸ ಮಾಡಿದ್ದ. ಆ ನಂತರ ಹಳೆ ಕೆಸರೆ ಯಲ್ಲಿ ಮನೆ ಕಟ್ಟುವ ಕೆಲಸ ಇತ್ತು ಅಲ್ಲಿಗೂ ಸಹ ನಾನು ಆರೋಪಿತನನ್ನು ಕರೆದುಕೊಂಡು ಹೋಗಿದ್ದೆ. ಆರೋಪಿತನು ನನಗೆ ಯಾರು ಇರುವುದಿಲ್ಲ, ಇಲ್ಲೇ ಕೆಲಸ ಮಾಡಿಕೊಂಡು ಇರುತ್ತೇನೆ ಎಂದು ಹೇಳುತ್ತಿದ್ದ ನಾನು ಆತನದು ಯಾವುದು ಊರು ಎನ್ನುವ ಬಗ್ಗೆ ಕೇಳಿರುವುದಿಲ್ಲ. ಹಳೆ ಕೆಸರೆ ಗ್ರಾಮದಲ್ಲಿ ನನಗೆ ಮಾಲೀಕರು ಪರಿಚಯ ಇದ್ದುದರಿಂದ ಒಂದು ರೂಂ ಅನ್ನು  ಆರೋಪಿತರು ಉಳಿಯಲು ಕೊಟ್ಟಿದ್ದರು.

ನಾನು ಪ್ರತಿ ದಿವಸ ಗಾರೆ ಕೆಲಸ ಮಾಡಿ ವಾಪಸ್ಸು ಮನೆಗೆ ಹೋಗುತ್ತಿದ್ದೆ ಆರೋಪಿತನು ಅಲ್ಲಿಯೇ ಉಳಿದುಕೊಳ್ಳುತ್ತಿದ್ದ. ನಾನು ಆರೋಪಿತನನ್ನು ಹಳೆ ಕೆಸರೆ ಗ್ರಾಮಕ್ಕೆ ಕೆಲಸಕ್ಕೆ ಕರೆದುಕೊಂಡು ಹೋದ 10–15 ದಿನಕ್ಕೆ ರಾತ್ರಿ  8.30 ಸುಮಾರಿಗೆ ಗಂಗಾ ಲೇಔಟ್ ನ ಅಕ್ಕಪಕ್ಕದ ಮನೆಯವರು ನನಗೆ ಫೋನ್ ಮಾಡಿ ನೀನು ಕರೆದುಕೊಂಡು ಬಂದಿರುವ ಹುಡುಗ ಯಾರೋ ಒಬ್ಬ ಅಜ್ಜಿಗೆ ಹೊಡೆದಿರುತ್ತಾನೆ ನೀವು ಬನ್ನಿ ಎಂದು ಹೇಳಿದ್ದರು ನಾನು ಕೂಡಲೇ ಹಳೆ ಕೆಸರೆ ಗ್ರಾಮಕ್ಕೆ ಹೋದೆ. ನಾನು ಹೋದಾಗ ಯಾರು ಇರಲಿಲ್ಲ. ಆರೋಪಿತನು ಸಹ ಇರಲಿಲ್ಲ. ನಾನು ಅಲ್ಲಿಗೆ ಹೋದ

ಮೇಲೆ ಆರೋಪಿತನು ಒಬ್ಬ ಅಜ್ಜಿಗೆ ಹೊಡೆದಿರುತ್ತಾನೆ ಎಂದು ಗೊತ್ತಾಯಿತು ಅವರ ಹೆಸರು ಗೊತ್ತಿರುವುದಿಲ್ಲ. ಆರೋಪಿತನು ಏತಕ್ಕಾಗಿ ಹೊಡೆದಿದ್ದ ಎಂದು ನನಗೆ ಗೊತ್ತಿರುವುದಿಲ್ಲ. ಆರೋಪಿತನು ಹೊಡೆದಿದ್ದ ಎಂದು ಮಾತ್ರ ಗೊತ್ತಾಗಿತ್ತು ಬೇರೆ ಏನು ಮಾಡಿದ್ದ ಎಂದು ನನಗೆ ಗೊತ್ತಾಗಿರಲಿಲ್ಲ. ಹೊಡೆಸಿಕೊಂಡಂತಹ ಅಜ್ಜಿ ಆಸ್ಪತ್ರೆಗೆ ಹೋಗಿರುತ್ತಾರೆ ಎಂದು ಗೊತ್ತಾಯಿತು ನಾನು ಹೋದಾಗ ಯಾರು ಇರಲಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದರು.

**ಈ ಹಂತದಲ್ಲಿ , ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ದಿನಾಂಕ 29.03.2023 ರಂದು ಹಳೆ ಕೆಸರೆ ಗ್ರಾಮದ ಗಂಗಾ ನಗರ ಲೇಔಟ್ ನಿಂದ ನನಗೆ ಫೋನ್ ಮಾಡಿದ್ದರು ಎಂದರೆ ಸರಿ. ಆ ರೀತಿ ಫೋನ್ ಮಾಡಿದಾಗ ನಾನು ಕೆಲಸಕ್ಕೆ ಸೇರಿಸಿಕೊಂಡಿದ್ದ ಆರೋಪಿತನು ಗಂಗಾ ನಗರದ ಲೇಔಟ್ ನಲ್ಲಿ ವಾಸವಾಗಿರುವ ಮಂಜುಳಾ ಎಂಬುವರಿಗೆ ಹೊಡೆದು ಅವರಿಂದ ಚಿನ್ನದ ಆಭರಣಗಳನ್ನು ಕಿತ್ತುಕೊಂಡು ಹೋಗಿದ್ದಾನೆ ಎಂದು ನನಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ಆರೋಪಿತನು ಮಂಜುಳ ಎಂಬುವರ ಮನೆಯ ಒಳಗೆ ನೀರು ಕೇಳುವ ರೀತಿಯಲ್ಲಿ ಹೋಗಿ ಬಾಗಿಲನ್ನು

ಹಾಕಿಕೊಂಡು ಅವರ ಮುಖಕ್ಕೆ ಚೊಂಬಿನಿಂದ ಹೊಡೆದು ಅವರು ಹಾಕಿದ್ದ ಚಿನ್ನದ ಸರ ಮತ್ತು ಓಲೆಯನ್ನು ಕಿತ್ತುಕೊಂಡು ಹೋಗಿರುವ ವಿಚಾರ ನನಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ಆರೋಪಿತನು ತಾನು ಮಂಡ್ಯ ಜಿಲ್ಲೆಯ ಆಲಹಳ್ಳಿ ಅಂತ ತಿಳಿಸಿದ್ದ ಎಂದರೆ ಸರಿಯಲ್ಲ. ನಾನು ದಿನಾಂಕ 30.03.2023 ರಂದು ಈ ಎಲ್ಲಾ ವಿಷಯವನ್ನು ಪೊಲೀಸರಿಗೆ ತಿಳಿಸಿದ್ದೆ ಎಂದರೆ ಸರಿಯಲ್ಲ. ನಾನು ಈಗ ಓದಿಹೇಳಿದ ನಿಪಿ–20 ರಂತೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದು ನಿಪಿ–20 ರಂತೆ ಹೇಳಿಕೆ ಕೊಟ್ಟಿದ್ದರೂ ಸಹ ಈ ಬಗ್ಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ :**

ಗಂಗಾ ನಗರ ಬಡಾವಣೆ ಯಿಂದ ನಾನು ಫೋನ್ ಮಾಡಿದ್ದರು ಎಂದು ಏನು ಹೇಳುತ್ತೇನೆಯೋ ಆ ಫೋನ್ ನಂಬರ್ ಅನ್ನು ನಾನು ಪೊಲೀಸರಿಗೆ ತಿಳಿಸಿರುವುದಿಲ್ಲ. ಗಂಗಾ ನಗರ ಬಡಾವಣೆಯಿಂದ ನನಗೆ ಫೋನ್ ಮಾಡಿದ್ದರು ಎಂದು ಹೇಳುವವರ ಹೆಸರನ್ನು ಪೊಲೀಸರಿಗೆ ನಾನು ತಿಳಿಸಿರುವುದಿಲ್ಲ. ನಾನು ಯಾರನ್ನಾದರೂ ಕೆಲಸಕ್ಕೆ ತೆಗೆದುಕೊಂಡರೆ ಅವರ ಹೆಸರು ಮತ್ತು ವಿಳಾಸವನ್ನು ಬರೆದುಕೊಳ್ಳುವುದಿಲ್ಲ. ನಾನು ಎಲ್ಲಿ ಎಲ್ಲಿ ಕೆಲಸ ಮಾಡಿರುತ್ತೇನೆಯೋ ಆ ಸ್ಥಳ ಗಳಲ್ಲಿ ಯಾರಿಂದ ಕೆಲಸ ಮಾಡಿಸಿದ್ದೆ ಎನ್ನುವ ಬಗ್ಗೆ ಅವರ ಹೆಸರು ಹೇಳಲು ಆಗುವುದಿಲ್ಲ. ಗಂಗಾ ನಗರ ಬಡಾವಣೆಯಿಂದ ನನಗೆ ಫೋನ್ ಮಾಡಿ ತಿಳಿಸಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ

ಫೋನ್ ಮಾಡಿದ ಮೇಲೆ ನಾನು ಕೂಡಲೇ ಪೊಲೀಸ್ ಠಾಣೆಗೆ ಹೋಗಿರಲಿಲ್ಲ. ಇದೇ ರೀತಿ ನ್ಯಾಯಾಲಯದ ಮುಂದೆ ಸಾಕ್ಷಿ ಹೇಳಬೇಕು ಎಂದು ನನಗೆ ಪೊಲೀಸರು ಹೇಳಿದ್ದರು ಎಂದರೆ ಸರಿಯಲ್ಲ. ಅದೇ ಕಾರಣಕ್ಕಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರವಿಚಾರಣೆಃ ಇಲ್ಲ</u>**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**